ಅಬಕಾರಿ ಇಲಾಖೆಯ ಆದಾಯ

2263 (2608); ಡಾ॥ ಸುಧಾಕರ್ ಕೆ. (ಚಿಕ್ಕಬಳ್ಳಾಪುರ)

ಅ) ಪ್ರಸಕ್ತ ವರ್ಷ ಅಬಕಾರಿ ಇಲಾಖೆಯಿಂದ ನಿರೀಕ್ಷಿಸಿರುವ ಆದಾಯದ ಪ್ರಮಾಣವೆಷ್ಟು; (ವಿವರ ನೀಡುವುದು);

ಆ) ಹಾಗಿದ್ದಲ್ಲಿ, 2014–15 ನೇ ಸಾಲಿನಲ್ಲಿ ಗಳಿಸಿದ ಆದಾಯವೆಷ್ಟು; ಯಾವ ಯಾವ ಮೂಲದಿಂದ ಎಷ್ಟು ಆದಾಯ ಸಂಗ್ರಹವಾಗಿದೆ; (ವಿವರ ನೀಡುವುದು);

ಇ) ಗ್ರಾಮೀಣ ಭಾಗದಲ್ಲಿ ಅಬಕಾರಿ ಇಲಾಖೆಯು ಎಂ.ಎಸ್.ಐ.ಎಲ್. ಮೂಲಕ 2014–15 ನೇ ಸಾಲಿನಲ್ಲಿ ಎಷ್ಟು ಮಳಿಗೆಗಳನ್ನು ತೆರೆದಿದೆ; (2015–16 ನೇ ಸಾಲಿನ ಗುರಿ ಏನು):

ಈ) ನಗರ ಭಾಗದಲ್ಲಿ ಅಬಕಾರಿ ಇಲಾಖೆಯು ಎಂ.ಎಸ್.ಐ.ಎಲ್. ಮೂಲಕ 2014–15 ನೇ ಸಾಲಿನಲ್ಲಿ ಎಷ್ಟು ಮಳಿಗೆಗಳನ್ನು ತೆರೆದಿದೆ; 2015–16 ನೇ ಸಾಲಿನ ಗುರಿ ಏನು;

ಉ) ರಾಜ್ಯದಲ್ಲಿ ಎಂ.ಎಸ್.ಐ.ಎಲ್ ನ ಎಷ್ಟು ಮದ್ಯದ ಮಳಿಗೆಗಳಿವೆ; ಅವುಗಳಿಂದ ಬರುತ್ತಿರುವ ಆದಾಯದ ಪ್ರಮಾಣವೆಷ್ಟು?

ಊ) ಅಬಕಾರಿ ಇಲಾಖೆಯ ಮೂಲಕ ಬರುತ್ತಿರುವ ಆದಾಯ ಹೆಚ್ಚಳಕ್ಕೆ ಇಲಾಖೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು)

ಅ) ಪ್ರಸಕ್ತ ಸಾಲಿನಲ್ಲಿ ಅಬಕಾರಿ ಇಲಾಖೆಗೆ ₹ 15,200 ಕೋಟಿಗಳ ರಾಜಸ್ವ ಗುರಿಯನ್ನು ನಿಗದಿಪಡಿಸಿದೆ. ವಿವರಗಳು ಕೆಳಕಂಡಂತಿವೆ.

ಮೂಲಗಳು	ರಾಜಸ್ವ (₹ ಕೋಟಿಗಳಲ್ಲಿ)
ಐ.ಎಂ.ಎಲ್	12940.00
ಬೀರ್	1650.00

ಸನ್ನದು ಶುಲ್ಕ	499.50
ಇತರೆ ಬಾಬ್ತು	110.50
ಒಟ್ಟು	**15200.00**

ಆ) 2014–15 ನೇ ಸಾಲಿಗೆ ಅಬಕಾರಿ ಇಲಾಖೆಯು ₹ 13801.19 ಕೋಟಿಗಳ ರಾಜಸ್ವವನ್ನು ಸಂಗ್ರಹಿಸಿದೆ. ವಿವಿಧ ಮೂಲಗಳಿಂದ ಸಂಗ್ರಹಿಸಲಾದ ವಿವರಗಳು ಕೆಳಕಂಡಂತೆ ಇದೆ.

ಮೂಲಗಳು	ರಾಜಸ್ವ (₹ ಕೋಟಿಗಳಲ್ಲಿ)
ಐ.ಎಂ.ಎಲ್	11651.40
ಬೀರ್	1570.64
ಸನ್ನದು ಶುಲ್ಕ	480.67
ಇತರೆ ಬಾಬ್ತು	98.48
ಒಟ್ಟು	**13801.19**

ಇ) 2014–15 ನೇ ಸಾಲಿಗೆ ಗ್ರಾಮೀಣ ಭಾಗದಲ್ಲಿ 13 ಸಿಎಲ್–11 (ಸಿ) ಸನ್ನದುಗಳನ್ನು ತೆರೆಯಲಾಗಿದೆ.

2015–16 ನೇ ಸಾಲಿಗೆ ಗ್ರಾಮೀಣ ಭಾಗದಲ್ಲಿ 32 ಸನ್ನದುಗಳನ್ನು ತೆರೆಯುವ ಗುರಿ ಹೊಂದಲಾಗಿದೆ.

ಈ) 2014–15 ನೇ ಸಾಲಿಗೆ ಗ್ರಾಮೀಣ ಭಾಗದಲ್ಲಿ 10 ಸಿಎಲ್–11 (ಸಿ) ಸನ್ನದುಗಳನ್ನು ತೆರೆಯಲಾಗಿದೆ.

2015–16 ನೇ ಸಾಲಿಗೆ ಗ್ರಾಮೀಣ ಭಾಗದಲ್ಲಿ 28 ಸನ್ನದುಗಳನ್ನು ತೆರೆಯುವ ಗುರಿ ಹೊಂದಲಾಗಿರುತ್ತದೆ.

ಉ) 403 ಮಳಿಗೆಗಳಿವೆ.

2014–15 ನೇ ಸಾಲಿಗೆ ಎಂ.ಎಸ್.ಐ.ಎಲ್ ವತಿಯಿಂದ 32.89 ಲಕ್ಷ ಭಾತಮ ರಟ್ಟಿನ ಪೆಟ್ಟಿಗೆ ಹಾಗೂ 11.42 ಲಕ್ಷ ಬಿಯರ್ ರಟ್ಟಿನ ಪೆಟ್ಟಿಗೆಗಳು ಮಾರಾಟವಾಗಿದ್ದು, ಅಬಕಾರಿ ಸುಂಕ ಹಾಗೂ ಹೆಚ್ಚುವರಿ ಅಬಕಾರಿ ಸುಂಕದಿಂದ ಇಲಾಖೆಗೆ ಅಂದಾಜು ₹ 781.37 ಕೋಟಿ ರಾಜಸ್ವ ಸಂದಾಯವಾಗಿರುತ್ತದೆ ಹಾಗೂ ಈ ಅವಧಿಯಲ್ಲಿ ಸನ್ನದು ಶುಲ್ಕ ಮತ್ತು ಹೆಚ್ಚುವರಿ ಸನ್ನದು ಶುಲ್ಕದಿಂದ ₹ 13.76 ಕೋಟಿ ರಾಜಸ್ವ ಸಂಗ್ರಹವಾಗಿರುತ್ತದೆ.

ಊ) ಅಬಕಾರಿ ಇಲಾಖೆಯು ನಿಗದಿತ ಗುರಿಯನ್ವಯ ರಾಜಸ್ವ ಸಂಗ್ರಹಿಸಲು ಈ ಕೆಳಕಂಡಂತೆ ಕ್ರಮ ವಹಿಸಲಾಗುತ್ತಿದೆ.

1) ರಾಜಸ್ವ ಗುರಿಗೆ ಅನುಗುಣವಾಗಿ ಡಿಸ್ಟಿಲರಿ, ಬ್ರೀವರಿ ಮತ್ತು ಮದ್ಯದಂಗಡಿಗಳಿಗೆ ಸನ್ನದು ಶುಲ್ಕವನ್ನು ಪರಿಷ್ಕರಿಸುವುದು.

(ಅ) 2014–15 ನೇ ಸಾಲಿಗೆ ಡಿಸ್ಟಿಲರಿ ಮತ್ತು ಬ್ರೀವರಿಗಳ ಸನ್ನದು ಶುಲ್ಕಗಳ ಪರಿಷ್ಕರಣೆಯಿಂದ ₹ 9.52 ಕೋಟಿಗಳ ಆದಾಯ ಹೆಚ್ಚುವರಿಯಾಗಿ ಸರ್ಕಾರದ ಬೊಕ್ಕಸಕ್ಕೆ ಬಂದಿರುತ್ತದೆ.

(ಆ) 2014–15 ನೇ ಸಾಲಿಗೆ ಎಂ.ಎಸ್.ಐ.ಎಲ್. ಮದ್ಯದಂಗಡಿಗಳ ಸನ್ನದು ಶುಲ್ಕಗಳ ಪರಿಷ್ಕರಣೆಯಿಂದಾಗಿ 5.72 ಕೋಟಿ ರೂ. ಗಳ ಆದಾಯ ಸರ್ಕಾರದ ಬೊಕ್ಕಸಕ್ಕೆ ಹೆಚ್ಚುವರಿಯಾಗಿ ಸಂಗ್ರಹವಾಗಿರುತ್ತದೆ.

2) ಭಾರತೀಯ ತಯಾರಿಕಾ ಮದ್ಯ ಹಾಗೂ ಬಿಯರ್ ಮೇಲಿನ ಹೆಚ್ಚುವರಿ ಅಬಕಾರಿ ಸುಂಕವನ್ನು ಪರಿಷ್ಕರಿಸುವುದು.

(ಅ) 2014–15 ನೇ ಸಾಲಿನಲ್ಲಿ ಬಿಯರ್ ಮೇಲಿನ ಹೆಚ್ಚುವರಿ ಅಬಕಾರಿ ಸುಂಕದ ಪರಿಷ್ಕರಣೆ ಯಿಂದಾಗಿ ಸರ್ಕಾರದ ಬೊಕ್ಕಸಕ್ಕೆ ₹ 100 ಕೋಟಿಗಳ ಆದಾಯ ಹೆಚ್ಚುವರಿಯಾಗಿ ಸಂಗ್ರಹಣೆಯಾಗಿದೆ.

(ಆ) 2015–16 ನೇ ಸಾಲಿಗೆ ಭಾರತೀಯ ತಯಾರಿಕಾ ಮದ್ಯಗಳ ಮೇಲಿನ ಹೆಚ್ಚುವರಿ ಅಬಕಾರಿ ಸುಂಕದ ದರ ಗಳನ್ನು ಪರಿಷ್ಕರಿಸಿರುವುದರಿಂದ ಈ ಸಾಲಿನಲ್ಲಿ ₹ 850 ಕೋಟಿಗಳು ಹೆಚ್ಚುವರಿಯಾಗಿ ಸಂಗ್ರಹವಾಗುವುದಾಗಿ ಅಂದಾಜಿಸಲಾಗಿದೆ.

3) ಜಾರಿ ಮತ್ತು ತನಿಖೆ ಚಟುವಟಿಕೆಗಳ ಕಟ್ಟುನಿಟ್ಟಿನ ನಿರ್ವಹಣೆ, ಸನ್ನದು ಆವರಣಗಳ ಚುರುಕು ತಪಾಸಣೆ, ಸನ್ನದೇತರ ಪ್ರದೇಶಗಳಲ್ಲಿ ಅಕ್ರಮ ಮದ್ಯ ಮಾರಾಟ ನಿಯಂತ್ರಣ, ಗಸ್ತು, ರಸ್ತೆಗಾವಲು, ಜಾರಿ ಮತ್ತು ತನಿಖಾ ಕ್ರಮ ಕೈಗೊಳ್ಳಲಾಗುವುದು.

ರೇಷ್ಮೆ ಮಾರುಕಟ್ಟೆ ಮಂಡಳಿಗೆ ಅನುದಾನ

2264 (2610); ಡಾ॥ ಸುಧಾಕರ್ ಕೆ. (ಚಿಕ್ಕಬಳ್ಳಾಪುರ)

ಅ) ರಾಜ್ಯದಲ್ಲಿ ರೇಷ್ಮೆ ಅಭಿವೃದ್ಧಿಗೆ ರಚನೆಯಾಗಿರುವ ರಾಜ್ಯ ರೇಷ್ಮೆ ಮಾರುಕಟ್ಟೆ ಮಂಡಳಿ (ಕೆಸ್ಎಂಬಿ) ಗೆ ರಾಜ್ಯ ಸರ್ಕಾರ ವಾರ್ಷಿಕವಾಗಿ ನೀಡುತ್ತಿರುವ ಅನುದಾನ ಎಷ್ಟು; ಯಾವ ರೂಪದಲ್ಲಿ ನೀಡಲಾಗುತ್ತದೆ;

ಆ) ಹಾಗಿದ್ದಲ್ಲಿ, ಸರ್ಕಾರ ಮಂಡಳಿಗೆ 30 ಕೋಟಿ ರೂ. ನೀಡುತ್ತಿರುವುದು ನಿಜವೆ; ಹಾಗಿದ್ದಲ್ಲಿ ಇದನ್ನು 500 ಕೋಟಿಗೆ ಹೆಚ್ಚಿಸುವ ಬೇಡಿಕೆ ಇದೆಯೇ; ಇದ್ದರೆ ಅದಕ್ಕೆ ಸರ್ಕಾರದ ಉತ್ತರವೇನು; (ವಿವರ ನೀಡುವುದು);

ಇ) ರೇಷ್ಮೆ ಗೂಡುಗಳನ್ನು ವೈಜ್ಞಾನಿಕವಾಗಿ ಅಳೆಯುವಲ್ಲಿ ಸರ್ಕಾರ ವಿಫಲವಾಗಿದೆ ಎನ್ನುವ ರೇಷ್ಮೆ ಬೆಳೆಗಾರರ ಸಂಘಟನೆಯ ಮುಖಂಡರ ಆರೋಪಕ್ಕೆ ಸರ್ಕಾರ ನೀಡಿದ ವಿವರವೇನು;